ಅ) ಅನುಮೋದಿಸಿರುವ ಬೆಂಗಳೂರು ನಗರದ ವ್ಯಾಪಕ ಅಭಿವೃದ್ಧಿ ಯೋಜನೆಯ ನಕ್ಷೆಯಂತೆ ಹಸಿರು ಪಟ್ಟಿಯ ವಿಸ್ತೀರ್ಣ 839.72 ಚದರ ಕಿ.ಮೀ. ಆಗಿರುತ್ತದೆ.

ಆ) -ಇಲ್ಲಾ-

ಇ) ಎಷ್ಟು ವಿಸ್ತೀರ್ಣದಲ್ಲಿ ಅನಧಿಕೃತ ಬೆಳವಣಿಗೆ ಆಗಿದೆ ಎಂದುದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ : ಬಚಾವತ್ ವೇತನ ಮಂಡಳಿಯ ಶಿಫಾರಸ್ಸು

Q:1252

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬಚಾವತ್ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಸರಕಾರವು ಕಾರ್ಯರೂಪಕ್ಕೆ ತಂದಿದೆಯೆ?

ಆ) ಹಾಗಿದ್ದಲ್ಲಿ ಈಗಾಗಲೇ ಯಾವ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತಂದಿದೆ. ಹಾಗೂ ಯಾವ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರಲು ಗುರಿ ಹೊಂದಿದೆ?

ಇ) ಕೇರಳ ರಾಜ್ಯದಲ್ಲಿರುವಂತೆ ವೇತನ ಮಂಡಳಿಯ ಶಿಫಾರಸ್ಸಿನನ್ವಯ ಪತ್ರಕರ್ತರಿಗೆ ಪಿಂಚಣಿ ನಿಧಿಯೊಂದನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಹೌದು.

ಆ) ಕಾರ್ಮಿಕ ಇಲಾಖೆಯ ವೃತ್ತಿ ನಿರತ ಮತ್ತು ವೃತ್ತಿ ನಿರತರಲ್ಲದ ಪತ್ರಿಕಾ ನೌಕರರಿಗೆ ಬಜಾವತ್ ವೇತನ ಮಂಡಳಿಯ ವೇತನ ಶಿಫಾರಸ್ಸುಗಳನ್ನು ಜಾರಿಗೊಳಿಸುತ್ತಿದೆ. ಆ ಪ್ರಕಾರ ಈ ಕೆಳಗಿನ ಪತ್ರಿಕಾ ಸಂಸ್ಥೆಗಳು ಸದರಿ ಶಿಫಾರಸ್ಸುಗಳನ್ನು ಆಯಾ ಸಂಸ್ಥೆಯ ವರ್ಗೀಕರಣ ಮತ್ತು ನೌಕರದರ್ಜೆಗಳಿಗೆ ಅನುಗುಣವಾಗಿ ವೇತನ ಶ್ರೇಣಿಗಳನ್ನು ಜಾರಿಗೊಳಿಸಲಾಗುತ್ತಿದೆ.

1) ದಿ ಪ್ರಿಂಟರ್ಸ್ (ಮೈಸೂರು) ಲಿ ಬೆಂಗಳೂರು ಮತ್ತು ಹುಬ್ಬಳ್ಳಿ
2) ಇಂಡಿಯನ್ ಎಕ್ಸ್‌ಪ್ರೆಸ್ ಬೆಂಗಳೂರು
3) ಲೋಕ ಶಿಕ್ಷಣ ಟ್ರಸ್ಟ್, ಬೆಂಗಳೂರು
4) ಸಾಲಾರ ಪಬ್ಲಿಕೇಷನ್ ಟ್ರಸ್ಟ್ ಬೆಂಗಳೂರು
5) ಮೆ : ಕಸ್ತೂರಿ ಅಂಡ್ ಸನ್ಸ್ (ದಿ ಹಿಂದೂ) ಬೆಂಗಳೂರು
6) ಟೈಮ್ಸ ಆಫ್ ಇಂಡಿಯಾ, ಬೆಂಗಳೂರು
7) ನ್ಯೂಸ್ ಪೇಪರ್ಸ್ ಅಂಡ್ ಪ್ರೀರಿಯಾಡಿಕಲ್ಸ್ ಬಸವನಗುಡಿ, ಬೆಂಗಳೂರು
8) ದಿ ಮೈಸೂರು ಪ್ರೆಸ್ (ಪ್ರೈ) ಲಿ. ಬಸವನಗುಡಿ, ಬೆಂಗಳೂರು
9) ಲಂಕೇಶ್ ಪತ್ರಿಕೆ, ಬೆಂಗಳೂರು
10) ದಿನಸುಧಾರ, ಬೆಂಗಳೂರು
11) ಸಂಜೆವಾಣಿ, ಬೆಂಗಳೂರು
12) ಮಣಿಪಾಲ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಮಣಿಪಾಲ

ಇ) -ಇಲ್ಲಾ-

ವಿಷಯ :- ರಾಜ್ಯದಲ್ಲಿ ಆಶ್ರಯ ಯೋಜನೆಯಡಿ ಅರಣ್ಯ ಪ್ರದೇಶದಲ್ಲಿ ನಿವೇಶನ ಹಂಚಿಕೆ.

Q:1220

ಶ್ರೀ ಕೆ. ಸಿ. ಮೊಡ್ಲೇಕರ್ ದೇಸಾಯಿ (ಹೀರೇಬಾಗೇವಾಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯ ಅರಣ್ಯ ಪ್ರದೇಶದಲ್ಲಿ ನಿವೇಶನಗಳನ್ನು ಹಂಚಿರುವುದು ನಿಜವೇ?

ಆ) ಹಾಗಾದರೆ, ಬೆಳಗಾವಿಯಲ್ಲಿ ಎಷ್ಟು ನಿವೇಶನಗಳನ್ನು ಫಲಾನುಭವಿಗಳಿಗೆಕೊಡಲಾಗಿದೆ?

ಶ್ರೀ ಗೋಪಿನಾಥ್‌ಆರ್. ಸಾಂಡ್ರ(ವಸತಿ ಸಚಿವರು) :

ಅ) ಹೌದು.

ಆ) ಇಲ್ಲ.

ವಿಷಯ :- ಮೈಸೂರು ನಗರದ ಅರಗು ಮತ್ತು ಬಣ್ಣದ ಕಾರ್ಖಾನೆ ಕುರಿತು